# ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ - ೨೦೨೨

ದಿನಾಂಕ ೧೨-೧೦-೨೦೨೨ ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ "ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-೨೦೨೨" ಕುರಿತು ಕನ್ನಡದ ಮಠಾಧೀಶರು, ನ್ಯಾಯಮೂರ್ತಿಗಳು, ಕಾನೂನು ತಜ್ಞರು, ಸಾಹಿತಿಗಳು, ಕೈಗಾರಿಕೋದ್ಯಮಿಗಳು, ಕನ್ನಡಪರ ಚಿಂತಕರು, ಮಾಧ್ಯಮದವರು, ಚಲನಚಿತ್ರ ರಂಗದವರು, ಕನ್ನಡಪರ ಹೋರಾಟಗಾರರೊಂದಿಗೆ ನಡೆದ ಚಿಂತನಾ ಗೋಷ್ಠಿಯಲ್ಲಿ ಸರ್ವಾನುಮತದಿಂದ ಸ್ವೀಕರಿಸಿದ ಸಲಹೆ-ಸೂಚನೆಗಳನ್ನು ಪರಿಶೀಲಿಸಿ, ಪರಿಗಣಿಸಿ ವಿಧೇಯಕದ ತಿದ್ದುಪಡಿಗಾಗಿ ಮಾಡಲಾದ ಶಿಫಾರಸ್ಸು - [ಹಳದಿ ಬಣ್ಣದಲ್ಲಿ (Highlight) ಗುರುತು ಮಾಡಲಾಗಿದೆ]

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗಾಗಿ ಮತ್ತು ಕನ್ನಡಿಗರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಉತ್ತಮ ಅವಕಾಶವನ್ನು ಒದಗಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಒಂದು ವಿಧೇಯಕ. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗಾಗಿ ಮತ್ತು ಕನ್ನಡಿಗರಿಗೆ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಅವಕಾಶಗಳನ್ನು ಮತ್ತು ಕಲ್ಯಾಣ ಕ್ರಮಗಳನ್ನು ಕಲ್ಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಲ್ಲಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ; | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ಇದು ಭಾರತ ಗಣರಾಜ್ಯದ ಎಪ್ಪತ್ತಮೂರನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಕೆಳಗಿನಂತೆ ಅಧಿನಿಯಮಿತವಾಗಲಿ; | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ೧. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ -<br>(೧) ಈ ಅಧಿನಿಯಮವನ್ನು ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿ ಅಧಿನಿಯಮ, ೨೦೨೨ ಎಂದು ಕರೆಯತಕ್ಕದ್ದು.<br>(೨) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗಾಗಿ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ೨. ಪರಿಭಾಷೆಗಳು - ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-<br>(ಎ) "ಶಿಸ್ತು ಪ್ರಾಧಿಕಾರಿ" ಎಂದರೆ, ಸಂಬಂಧಿತ ಸೇವಾ ನಿಯಮಗಳಲ್ಲಿ ಶಿಸ್ತು ಪ್ರಾಧಿಕಾರಿ ಎಂದು ಗೊತ್ತುಪಡಿಸಿದ ಅಧಿಕಾರಿ;<br>(ಬಿ) "ಜಾರಿ ಪ್ರಾಧಿಕಾರ" ಎಂದರೆ, ಅಧಿನಿಯಮದ ಪ್ರಕರಣ ೭ರ ಮೇರೆಗೆ ನಿಯೋಜಿಸಿದ ಸಮಿತಿಗಳು;<br>(ಸಿ) "ಜಾರಿ ಅಧಿಕಾರಿ" ಎಂದರೆ, ಅಧಿನಿಯಮದ ಪ್ರಕರಣ ೯ರ ಮೇರೆಗೆ ಗೊತ್ತುಪಡಿಸಿದ ಅಧಿಕಾರಿ;<br>(ಡಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ; | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (ಇ) "ಕನ್ನಡಿಗ" ಎಂದರೆ, ಯಾವುದೇ ವ್ಯಕ್ತಿ ಅಥವಾ ಆತನ ತಂದೆ, ತಾಯಿ ಅಥವಾ ಅವರ ಅನುಪಸ್ಥಿತಿಯಲ್ಲಿ ಕಾನೂನುಸಮ್ಮತ ಪಾಲಕರು, ೧೫ ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಕರ್ನಾಟಕದಲ್ಲಿ ಸಾಮಾನ್ಯವಾಗಿ ವಾಸವಾಗಿರಬೇಕು ಮತ್ತು ಕನ್ನಡ ಓದುವ ಹಾಗೂ ಬರೆಯುವ ಜ್ಞಾನ ಹೊಂದಿರಬೇಕು ಮತ್ತು ಈ ಬಗ್ಗೆ ನಿಯಮಿಸಬಹುದಾದಂಥ ದಾಖಲೆಗಳನ್ನು ಹೊಂದಿರಬೇಕು; | *(ಇ) "ಕನ್ನಡಿಗ" ಎಂದರೆ,*<br>*(i) ಕರ್ನಾಟಕ ರಾಜ್ಯದಲ್ಲಿ ಕನಿಷ್ಠ ೧೫ ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯವರೆಗೆ ವಾಸವಾದ ವ್ಯಕ್ತಿ ಅಥವಾ ಆತನ ಸಂತಾನ ಅಥವಾ ಅಂಥ ವ್ಯಕ್ತಿಯ ಕಾನೂನು ಸಮ್ಮತ ಪಾಲನೆ ಪೋಷಣೆಯಲ್ಲಿರುವ ವ್ಯಕ್ತಿ.*<br>*(ii) ಕರ್ನಾಟಕದಲ್ಲಿ ವಾಸವಾಗಿರದೇ ಗಡಿರಾಜ್ಯ, ಹೊರರಾಜ್ಯ ಮತ್ತು ಹೊರದೇಶಗಳನ್ನು ಒಳಗೊಂಡಂತೆ ಎಲ್ಲಿಯೇ ವಾಸವಾಗಿದ್ದರೂ ಕೂಡ ಕನ್ನಡದಲ್ಲಿ ಓದಬಲ್ಲ ಮತ್ತು ಮಾತನಾಡಬಲ್ಲ ವ್ಯಕ್ತಿ.* |
| (ಎಫ್) "ಸ್ಥಳೀಯ ಪ್ರಾಧಿಕಾರ" ಎಂದರೆ, ಕಾನೂನಿನ ಮೂಲಕ ರಚಿಸಲ್ಪಟ್ಟ ಸ್ಥಳೀಯ ಸ್ವಯಂ ಸರ್ಕಾರಗಳು ಮತ್ತು ಸರ್ಕಾರದ ಮೂಲಕ ಸ್ಥಾಪಿಸಲಾದ ಯಾವುದೇ ಶಾಸಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳು, ನ್ಯಾಸಗಳು, ಸಹಕಾರಿ ಅಥವಾ ಇತರೆ ಸಂಘಗಳು ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಇತರ ಸಂಸ್ಥೆಗಳನ್ನು ಒಳಗೊಂಡಿರುತ್ತದೆ; | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (ಜಿ) "ಅಧಿಕೃತ ಭಾಷೆ" ಎಂದರೆ, ಅಧಿನಿಯಮದ ಪ್ರಕರಣ ೩ರ ಮೇರೆಗೆ ಘೋಷಿಸಲಾದ ಕನ್ನಡ ಭಾಷೆ; | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (ಎಚ್) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ೩. ರಾಜ್ಯದ ಅಧಿಕೃತ ಭಾಷೆ – ಕನ್ನಡ ಭಾಷೆಯು ರಾಜ್ಯದ ಹಾಗೂ ಸ್ಥಳೀಯ ಪ್ರಾಧಿಕಾರದ ಅಧಿಕೃತ ಭಾಷೆಯಾಗಿರತಕ್ಕದ್ದು. | ೩. ರಾಜ್ಯದ ಅಧಿಕೃತ ಭಾಷೆ – *ಕನ್ನಡ ಭಾಷೆಯು ರಾಜ್ಯದ, ಸ್ಥಳೀಯ ಪ್ರಾಧಿಕಾರದ ಹಾಗೂ ರಾಜ್ಯ ಸರ್ಕಾರದ ಅನುದಾನಿತ ಮತ್ತು ನಿಯಂತ್ರಣದಲ್ಲಿರುವ ಎಲ್ಲ ಸಂಘ–ಸಂಸ್ಥೆಗಳ ಅಧಿಕೃತ ಭಾಷೆಯಾಗಿರತಕ್ಕದ್ದು.* |
| ೪. ಅಧಿಕೃತ ಭಾಷೆಯ ಬಳಕೆ –<br>(೧) ಕನ್ನಡವನ್ನು,–<br>(i) ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸಲಾಗುವ ಎಲ್ಲಾ ವಿಧೇಯಕಗಳಲ್ಲಿ ಹಾಗೂ ಅಂಗೀಕರಿಸಲಾಗುವ ಎಲ್ಲಾ ಅಧಿನಿಯಮಗಳಲ್ಲಿ; | ೪. ಅಧಿಕೃತ ಭಾಷೆಯ ಬಳಕೆ –<br>(೧) ಕನ್ನಡವನ್ನು,–<br>ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
| --- | --- |
| (ii) ಸರ್ಕಾರ, ಎಲ್ಲಾ ಸ್ಥಳೀಯ ಸಂಸ್ಥೆಗಳು, ಮಂಡಳಿಗಳು, ನಿಗಮಗಳು ಶಾಸನಬದ್ಧ ಮತ್ತು ಶಾಸನಬದ್ಧವಲ್ಲದ ನಿಕಾಯಗಳು ಅಥವಾ ಉದ್ಯಮಗಳು ಹಾಗೂ ನೋಂದಾಯಿತ ಸಹಕಾರಿ ಸಂಘಗಳು ಹೊರಡಿಸುವ ಎಲ್ಲಾ ಆದೇಶಗಳಲ್ಲಿ, ನಿಯಮಗಳಲ್ಲಿ, ವಿನಿಯಮಗಳಲ್ಲಿ ಹಾಗೂ ಉಪವಿಧಿಗಳಲ್ಲಿ ಅಧಿಕೃತ ಭಾಷೆಯನ್ನಾಗಿ ಬಳಸತಕ್ಕದ್ದು. | **ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| **ಹೊಸ ಸೇರ್ಪಡೆ** | ***(iii) ಭಾರತ ಸಂವಿಧಾನದ ಅನುಚ್ಛೇದ ೨೧೩ರ ಅಡಿಯಲ್ಲಿ ಕರ್ನಾಟಕದ ರಾಜ್ಯಪಾಲರು ಹೊರಡಿಸುವ ಎಲ್ಲಾ ಅಧ್ಯಾದೇಶಗಳಲ್ಲಿ;*** |
| (೨) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ರಾಜ್ಯ ವಿಧಾನಮಂಡಲವು ಆಂಗ್ಲ, ಭಾಷೆಯಲ್ಲಿ ಅಧಿನಿಯಮಿಸಲಾದ ಜಾರಿಯಲ್ಲಿರುವ ಎಲ್ಲಾ ಶಾಸನಗಳನ್ನು ಕನ್ನಡ ಭಾಷೆಗೆ ಭಾಷಾಂತರಿಸತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು. | *(೨) ಈ ಅಧಿನಿಯಮ ಜಾರಿಗೆ ಬಂದ ಕೂಡಲೇ ರಾಜ್ಯ ವಿಧಾನಮಂಡಲವು ಆಂಗ್ಲ, ಭಾಷೆಯಲ್ಲಿ ಅಧಿನಿಯಮಿಸಲ್ಪಟ್ಟು ಜಾರಿಯಲ್ಲಿರುವ ಎಲ್ಲಾ ಶಾಸನಗಳನ್ನು, ಕನ್ನಡ ಭಾಷೆಗೆ ಭಾಷಾಂತರಿಸತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು.* |
| (೩) ಎಲ್ಲಾ ಪ್ರಮುಖ ಕೇಂದ್ರ ಅಧಿನಿಯಮಗಳನ್ನು (ಕರ್ನಾಟಕ ತಿದ್ದುಪಡಿಗಳೊಂದಿಗೆ) ಸಹ ಕನ್ನಡ ಭಾಷೆಗೆ ಭಾಷಾಂತರಿಸತಕ್ಕದ್ದು. | **ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| (೪) ರಾಜ್ಯ ಅಥವಾ ಸ್ಥಳೀಯ ಪ್ರಾಧಿಕಾರಗಳು ತಮ್ಮ ಎಲ್ಲಾ ಅಧಿಕೃತ ಹಾಗೂ ಆಡಳಿತಾತ್ಮಕ ಉದ್ದೇಶಗಳಿಗಾಗಿ ಮತ್ತು ಪತ್ರವ್ಯವಹಾರಕ್ಕಾಗಿ ಕನ್ನಡ **ಭಾಷೆಯನ್ನು** ಬಳಸತಕ್ಕದ್ದು:<br>ಪರಂತು: | (೪) ರಾಜ್ಯ ಅಥವಾ ಸ್ಥಳೀಯ ಪ್ರಾಧಿಕಾರಗಳು ತಮ್ಮ ಎಲ್ಲಾ ಅಧಿಕೃತ ಹಾಗೂ ಆಡಳಿತಾತ್ಮಕ ಉದ್ದೇಶಗಳಿಗಾಗಿ ಮತ್ತು ಪತ್ರವ್ಯವಹಾರಕ್ಕಾಗಿ ಕನ್ನಡ ***ಭಾಷೆಯನ್ನೇ*** ಬಳಸತಕ್ಕದ್ದು:<br>ಪರಂತು: |
| (ಎ) ಭಾರತ ಸರ್ಕಾರ, ವಿದೇಶಗಳು, ಇತರ ರಾಜ್ಯಗಳು, ಉಚ್ಚ ನ್ಯಾಯಾಲಯಗಳು, ಸರ್ವೋಚ್ಚ ನ್ಯಾಯಾಲಯ ಇವುಗಳ ಕಚೇರಿಗಳೊಂದಿಗೆ ಪತ್ರ ವ್ಯವಹಾರಕ್ಕಾಗಿ ಮತ್ತು ಕಾನೂನಿನ ಮೂಲಕ ಆಂಗ್ಲ ಭಾಷೆಯನ್ನು ಬಳಸುವುದಕ್ಕಾಗಿ ಉಪಬಂಧಿಸಲಾಗಿರುವ ಯಾವುದೇ ಇತರೆ ಸನ್ನಿವೇಶಗಳಲ್ಲಿ ಆಂಗ್ಲ ಭಾಷೆಯನ್ನು ಬಳಸಬಹುದು; | **ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| (ಬಿ) ಭಾಷಾ ಅಲ್ಪಸಂಖ್ಯಾತರು, ಸರ್ಕಾರ ಮತ್ತು ಇಲಾಖೆಗಳ ಮುಖ್ಯಸ್ಥರೊಂದಿಗೆ ಮತ್ತು ಇತರೆ ಸರ್ಕಾರಿ ಕಚೇರಿಗಳೊಂದಿಗೆ ಪತ್ರ ವ್ಯವಹಾರಕ್ಕಾಗಿ ಸಾಧ್ಯವಾದಷ್ಟುಮಟ್ಟಿಗೆ ಕನ್ನಡ ಭಾಷೆಯನ್ನು ಅಥವಾ ಆಂಗ್ಲ ಭಾಷೆಯನ್ನು ಬಳಸತಕ್ಕದ್ದು. ಅಂಥ ಸಂದರ್ಭಗಳಲ್ಲಿ ಉತ್ತರಗಳನ್ನು ಕನ್ನಡದಲ್ಲಿ ಅಥವಾ ಆಂಗ್ಲ ಭಾಷೆಯಲ್ಲಿ ನೀಡಬಹುದು. | ***(ಬಿ) ಭಾಷಾ ಅಲ್ಪಸಂಖ್ಯಾತರು, ಸರ್ಕಾರ ಮತ್ತು ಇಲಾಖೆಗಳ ಮುಖ್ಯಸ್ಥರೊಂದಿಗೆ ಮತ್ತು ಇತರೆ ಸರ್ಕಾರಿ ಕಚೇರಿಗಳೊಂದಿಗೆ ಪತ್ರ ವ್ಯವಹಾರಕ್ಕಾಗಿ ಕನ್ನಡ ಭಾಷೆಯನ್ನು, ಬಳಸತಕ್ಕದ್ದು.*** |

<table>
<tr><th>ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ</th><th>ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ</th></tr>
<tr><td>(ಸಿ) ಆಡಳಿತಾತ್ಮಕ ಕಾರಣಗಳಿಗಾಗಿ ಇಂಗ್ಲಿಷ್ ಭಾಷೆಯನ್ನು ಬಳಸುವುದು ಅನಿವಾರ್ಯವಾಗಿದ್ದಲ್ಲಿ ಅಥವಾ ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ವ್ಯವಹರಿಸುವಾಗ ಆಂಗ್ಲ ಭಾಷೆಯನ್ನು ಬಳಸಬಹುದು.</td><td>(ಸಿ) ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ವ್ಯವಹರಿಸುವಾಗ ಕನ್ನಡ ಭಾಷಾ ಬಳಕೆಯನ್ನು ಉತ್ತೇಜಿಸಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಆಂಗ್ಲ ಭಾಷೆಯನ್ನು ಬಳಸಬಹುದು.</td></tr>
<tr><td>೫. ರಾಜಭಾಷಾ ಆಯೋಗ –<br>(೧) ರಾಜ್ಯ ಸರ್ಕಾರವು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಅಡಿಯಲ್ಲಿ ಈ ಮುಂದಿನ ಸದಸ್ಯರನ್ನು ಒಳಗೊಂಡ ರಾಜಭಾಷಾ ಆಯೋಗವನ್ನು ರಚಿಸತಕ್ಕದ್ದು, ಎಂದರೆ:–
<table>
<tr><td>(ಎ)</td><td>ನಿವೃತ್ತ ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಇಲಾಖೆ.</td><td>ಅಧ್ಯಕ್ಷರು</td></tr>
<tr><td>(ಬಿ)</td><td>ಉಪನಿರ್ದೇಶಕರ ಹುದ್ದೆಗಿಂತ ಕಡಿಮೆಯಿಂದ ಭಾಷಾಂತರ ಇಲಾಖೆಯ ಒಬ್ಬ ನಿವೃತ್ತ ಅಧಿಕಾರಿ.</td><td>ಸದಸ್ಯರು</td></tr>
<tr><td>(ಸಿ)</td><td>ಭಾಷಾಂತರ ಜ್ಞಾನವುಳ್ಳ ಮತ್ತು ಕಾನೂನು ಪದವೀಧರರಾಗಿರುವ ಒಬ್ಬ ನಿವೃತ್ತ ಅಧಿಕಾರಿ ಅಥವಾ ನಿವೃತ್ತ ಪ್ರಾಧ್ಯಾಪಕ.</td><td>ಸದಸ್ಯರು</td></tr>
<tr><td>(ಡಿ)</td><td>ಭಾಷಾಂತರ ಇಲಾಖೆಯ ಅಪರ ನಿರ್ದೇಶಕ.</td><td>ಸದಸ್ಯ ಕಾರ್ಯದರ್ಶಿ</td></tr>
</table>
(೨) ಸರ್ಕಾರದಿಂದ ನಾಮ ನಿರ್ದೇಶನಗೊಂಡ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳು, ಐದು ವರ್ಷಗಳ ಅವಧಿಗೆ ಪದವನ್ನು ಹೊಂದಿರತಕ್ಕದ್ದು.<br>(೩) ನಾಮನಿರ್ದೇಶನಗೊಂಡ ಅಧ್ಯಕ್ಷರು ಮತ್ತು ಸದಸ್ಯರು ಆಯೋಗದ ಪೂರ್ಣಕಾಲಿಕ ಸದಸ್ಯರಾಗಿರತಕ್ಕದ್ದು ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳಲ್ಲಿ ನಿರ್ದಿಷ್ಟಪಡಿಲಾದಂಥ ವೇತನ ಮತ್ತು ಭತ್ಯೆಗಳನ್ನು ಪಡೆಯಲು ಅರ್ಹರಾಗಿರತಕ್ಕದ್ದು.</td><td>೫. ರಾಜಭಾಷಾ ಆಯೋಗ –<br>ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಯ ಅಡಿಯಲ್ಲಿ ನಿಯಮಾವಳಿ ಅನ್ವಯ ರಚಿಸಲಾದ ರಾಜ ಭಾಷಾ ಆಯೋಗವು ರಾಜ್ಯ ಮತ್ತು ಕೇಂದ್ರ ಅಧಿನಿಯಮಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸುವುದಕ್ಕಾಗಿ ಜವಾಬ್ದಾರವಾಗಿರತಕ್ಕದ್ದು.<br><br>(ಕಲಂ ೫ (೧) (೨) ಹಾಗೂ (೩) ಅನ್ನು ಕೈಬಿಡುವುದು.)</td></tr>
<tr><td>೬. ಕೇಂದ್ರ ಮತ್ತು ರಾಜ್ಯ ಅಧಿನಿಯಮ, ನಿಯಮ, ವಿನಿಯಮ ಇತ್ಯಾದಿಗಳ ಅಧಿಕೃತ ಕನ್ನಡ ಭಾಷಾಂತರ.–<br>(೧) ಭಾರತ ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ – III ರಲ್ಲಿ ನಮೂದಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಕೇಂದ್ರ ಅಧಿನಿಯಮಗಳ ಅಥವಾ ರಾಜ್ಯಪಾಲರ ಪ್ರಾಧಿಕಾರದ ಅಡಿಯಲ್ಲಿ ಯಾವುದೇ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ಕನ್ನಡ ಭಾಷೆಯಲ್ಲಿರುವ ಯಾವುದೇ ರಾಜ್ಯ ಅಧಿನಿಯಮಗಳ ಭಾಷಾಂತರವನ್ನು ಅಧಿಕೃತ ಪಠ್ಯವೆಂದು ಭಾವಿಸತಕ್ಕದ್ದು.</td><td>ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ.</td></tr>
</table>

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (೨) ರಾಜ್ಯ ಸರ್ಕಾರವು ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಅಡಿಯಲ್ಲಿ ಮಾಡಿದ ಹಾಗೂ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ಯಾವುದೇ, ನಿಯಮ, ವಿನಿಯಮ, ಉಪವಿಧಿ, ಯೋಜನೆ, ಆದೇಶ, ಅಧಿಸೂಚನೆ ಮುಂತಾದವುಗಳ ಕನ್ನಡ ಭಾಷೆಯಲ್ಲಿನ ಭಾಷಾಂತರವನ್ನು ಅಧಿಕೃತ ಪಠ್ಯವೆಂದು ಭಾವಿಸತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೭. ಅಧಿಕೃತ ಭಾಷೆಯ ಅನುಷ್ಠಾನಕ್ಕಾಗಿ ಕಾರ್ಯವ್ಯವಸ್ಥೆ –**<br>(೧) ಸಚಿವಾಲಯದ ಪ್ರತಿಯೊಂದು ಇಲಾಖೆಯ ಅಧೀನದಲ್ಲಿ ಬರುವ ಮತ್ತು ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಅಧಿಕಾರಿಗಳೂ ಸೇರಿದಂತೆ ರಾಜ್ಯ ಸರ್ಕಾರದ ಪ್ರತಿಯೊಂದು ಕಚೇರಿಯೂ ಈ ಅಧಿನಿಯಮದ ಉಪಬಂಧಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕನ್ನಡ ಬಳಕೆಗಾಗಿ ಸಾರ್ವಜನಿಕ ಸಂಪರ್ಕಕ್ಕೆ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿರುವ ತನ್ನ ಕಾರ್ಯನೀತಿಗಳಲ್ಲಿ ಸೂಕ್ತ ಉಪಬಂಧಗಳನ್ನು ಕಲ್ಪಿಸತಕ್ಕದ್ದು. | **೭. ಅಧಿಕೃತ ಭಾಷೆಯ ಅನುಷ್ಠಾನಕ್ಕಾಗಿ ಕಾರ್ಯವ್ಯವಸ್ಥೆ –**<br>ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೨) ಈ ಕೆಳಕಂಡ ಸಮಿತಿಗಳು ರಾಜ್ಯದಲ್ಲಿ ಜಾರಿ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸತಕ್ಕದ್ದು ಎಂದರೆ:–<br>(ಎ) ರಾಜ್ಯ ಮಟ್ಟದ ಸಮಿತಿ: ಈ ಕೆಳಕಂಡವರನ್ನು ಒಳಗೊಂಡ ಒಂದು ರಾಜ್ಯಮಟ್ಟದ ಸಮಿತಿ ಇರತಕ್ಕದ್ದು:–<br>(i) ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಅಧ್ಯಕ್ಷರು<br>(ii) ಸರ್ಕಾರದ ಮುಖ್ಯ ಕಾರ್ಯದರ್ಶಿ – ಉಪಾಧ್ಯಕ್ಷರು<br>(iii) ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ – ಸದಸ್ಯರು<br>(iv) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ – ಸದಸ್ಯರು<br>(v) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ. – ಸದಸ್ಯರು | (೨) ಈ ಕೆಳಕಂಡ ಸಮಿತಿಗಳು ರಾಜ್ಯದಲ್ಲಿ ಜಾರಿ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸತಕ್ಕದ್ದು ಎಂದರೆ:–<br>(ಎ) ರಾಜ್ಯ ಮಟ್ಟದ ಸಮಿತಿ: ಈ ಕೆಳಕಂಡವರನ್ನು ಒಳಗೊಂಡ ಒಂದು ರಾಜ್ಯಮಟ್ಟದ ಸಮಿತಿ ಇರತಕ್ಕದ್ದು:–<br>(i) ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಅಧ್ಯಕ್ಷರು<br>***(ii) ಕನ್ನಡ ಸಾಹಿತ್ಯ ಪರಿಷತ್ತಿನ ಚುನಾಯಿತ ಅಧ್ಯಕ್ಷರು – ಉಪಾಧ್ಯಕ್ಷರು***<br>(iii) ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ – ಸದಸ್ಯರು<br>(iv) ಸರ್ಕಾರದ ಮುಖ್ಯ ಕಾರ್ಯದರ್ಶಿ – ಸದಸ್ಯರು<br>(v) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ – ಸದಸ್ಯರು<br>(vi) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ. – ಸದಸ್ಯರು |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (vi) ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಸದಸ್ಯರು<br>(vii) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ – ಸಂಚಾಲಕರು<br><br>ಪರಂತು, ಅಧ್ಯಕ್ಷರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ರಾಜ್ಯಮಟ್ಟದ ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. | (vii) ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಸದಸ್ಯರು<br>*(viii) ಕರ್ನಾಟಕ ವಕೀಲ ಪರಿಷತ್ತಿನ ಅಧ್ಯಕ್ಷರು – ಸದಸ್ಯರು*<br>*(ix) ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು – ಸದಸ್ಯರು*<br>*(x) ವರ್ತಮಾನ ಪತ್ರಿಕೆಗಳ ಪ್ರಸರಣದ ಸಂಬಂಧಿಸಿದ ಬಗ್ಗೆ ಪ್ರಸರಣ ಲೆಕ್ಕಪರಿಶೋಧಕ ಸಂಸ್ಥೆ (ಎಬಿಸಿ) ಘೋಷಿಸುವ ಮೊದಲ ಹತ್ತು ಕನ್ನಡ ದಿನಪತ್ರಿಕೆಗಳ ಸಂಪಾದಕರುಗಳಲ್ಲಿ ಒಬ್ಬರು – ಸದಸ್ಯರು*<br>(xi) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ – ಸಂಚಾಲಕರು<br><br>**ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| **(ಬಿ) ಜಿಲ್ಲಾ ಮಟ್ಟದ ಸಮಿತಿ:** ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಜಿಲ್ಲಾ ಸಮಿತಿ ಇರತಕ್ಕದ್ದು ಮತ್ತು ಈ ಕೆಳಕಂಡವರು ಅದರ ಸದಸ್ಯರಾಗಿರತಕ್ಕದ್ದು:<br>(i) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತ್;<br>(ii) ಮಹಾನಗರ ಪಾಲಿಕೆ ಇರುವ ಜಿಲ್ಲೆಗಳಲ್ಲಿ ಮಹಾನಗರ ಪಾಲಿಕೆಯ ಆಯುಕ್ತರು ಮಹಾನಗರ ಪಾಲಿಕೆ ಇಲ್ಲದ ಇತರ ಜಿಲ್ಲೆಗಳಲ್ಲಿ ನಗರಸಭೆಯ ಆಯುಕ್ತರು ಅಥವಾ ಸಂದರ್ಭಾನುಸಾರ, ಮುಖ್ಯಾಧಿಕಾರಿ;<br>(iii) ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು;<br>(iv) ಆಯಾ ಜಿಲ್ಲೆಯ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರು;<br>(v) ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು;<br>(vi) ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇರುವ ಸಂಚಾಲಕರು – ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು. | (ಬಿ) ಜಿಲ್ಲಾ ಮಟ್ಟದ ಸಮಿತಿ: *ಜಿಲ್ಲಾ ಉಸ್ತುವಾರಿ ಮಂತ್ರಿಗಳ ಅಥವಾ ಜಿಲ್ಲೆಯ ಲೋಕಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಉಪಾಧ್ಯಕ್ಷತೆಯಲ್ಲಿ* ಒಂದು ಜಿಲ್ಲಾ ಸಮಿತಿ ಇರತಕ್ಕದ್ದು ಮತ್ತು ಈ ಕೆಳಕಂಡವರು ಅದರ ಸದಸ್ಯರಾಗಿರತಕ್ಕದ್ದು:<br>(i) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತ್;<br>(ii) ಮಹಾನಗರ ಪಾಲಿಕೆ ಇರುವ ಜಿಲ್ಲೆಗಳಲ್ಲಿ ಮಹಾನಗರ ಪಾಲಿಕೆಯ ಆಯುಕ್ತರು ಮಹಾನಗರ ಪಾಲಿಕೆ ಇಲ್ಲದ ಇತರ ಜಿಲ್ಲೆಗಳಲ್ಲಿ ನಗರಸಭೆಯ ಆಯುಕ್ತರು ಅಥವಾ ಸಂದರ್ಭಾನುಸಾರ, ಮುಖ್ಯಾಧಿಕಾರಿ;<br>*(iii) ಚುನಾಯಿತ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು*<br>*(iv) ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು*<br>(v) ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು;<br>(vi) ಆಯಾ ಜಿಲ್ಲೆಯ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರು;<br>(vii) ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು;<br>(viii) ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇರುವ ಸಂಚಾಲಕರು – ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (ಸಿ) ತಾಲ್ಲೂಕು ಮಟ್ಟದ ಸಮಿತಿ: ಈ ಕೆಳಕಂಡವರನ್ನು ಒಳಗೊಂಡಿರುವ ಒಂದು ತಾಲ್ಲೂಕು ಮಟ್ಟದ ಸಮಿತಿ ಇರತಕ್ಕದ್ದು:<br>(i) ಉಪವಿಭಾಗಾಧಿಕಾರಿ – ಅಧ್ಯಕ್ಷರು;<br>(ii) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ – ಸದಸ್ಯರು;<br>(iii) ತಾಲ್ಲೂಕಿನ ತಹಶೀಲ್ದಾರರು – ಸಂಚಾಲಕರು.<br>(iv) ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ – ಸದಸ್ಯರು;<br>(v) ನಗರ ಸಭೆ, ಪುರಸಭೆ ಅಥವಾ ಪಟ್ಟಣ ಪಂಚಾಯತಿಯ ಆಯುಕ್ತ ಅಥವಾ ಮುಖ್ಯಾಧಿಕಾರಿ – ಸದಸ್ಯರು;<br>(vi) ತಾಲ್ಲೂಕಿನಲ್ಲಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು – ಸದಸ್ಯರು; | (ಸಿ) ತಾಲ್ಲೂಕು ಮಟ್ಟದ ಸಮಿತಿ: ಈ ಕೆಳಕಂಡವರನ್ನು ಒಳಗೊಂಡಿರುವ ಒಂದು ತಾಲ್ಲೂಕು ಮಟ್ಟದ ಸಮಿತಿ ಇರತಕ್ಕದ್ದು:<br>*(i) ತಾಲ್ಲೂಕು ಶಾಸಕರು – ಅಧ್ಯಕ್ಷರು;*<br>(ii) ಉಪವಿಭಾಗಾಧಿಕಾರಿ – ಉಪಾಧ್ಯಕ್ಷರು;<br>(iii) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ – ಸದಸ್ಯರು;<br>(iv) ತಾಲ್ಲೂಕಿನ ತಹಶೀಲ್ದಾರರು – ಸಂಚಾಲಕರು.<br>*(v) ಚುನಾಯಿತ ಅಧ್ಯಕ್ಷರು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು – ಸದಸ್ಯರು*<br>*(vi) ತಾಲ್ಲೂಕು ವಕೀಲ ಸಂಘದ ಅಧ್ಯಕ್ಷರು – ಸದಸ್ಯರು*<br>(vii) ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ – ಸದಸ್ಯರು;<br>(viii) ನಗರ ಸಭೆ, ಪುರಸಭೆ ಅಥವಾ ಪಟ್ಟಣ ಪಂಚಾಯತಿಯ ಆಯುಕ್ತ ಅಥವಾ ಮುಖ್ಯಾಧಿಕಾರಿ – ಸದಸ್ಯರು;<br>(ix) ತಾಲ್ಲೂಕಿನಲ್ಲಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು – ಸದಸ್ಯರು; |
| ೮. ಜಾರಿ ಪ್ರಾಧಿಕಾರಿಗಳ ಪ್ರಕಾರ್ಯಗಳು<br>(೧) (ಎ) ತಾಲ್ಲೂಕು ಮಟ್ಟದ ಸಮಿತಿ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ಕನ್ನಡ ಭಾಷೆಯ ಅನುಷ್ಠಾನದ ಕುರಿತು ಕೈಗೊಂಡಿರುವ ಕ್ರಮಗಳ ಬಗೆಗಿನ ತನ್ನ ವರದಿಯನ್ನು ಸಭೆಯ ದಿನಾಂಕದಿಂದ ೧೫ ದಿನಗಳೊಳಗಾಗಿ ಜಿಲ್ಲಾ ಮಟ್ಟದ ಸಮಿತಿಗೆ ಸಲ್ಲಿಸತಕ್ಕದ್ದು.<br>(ಬಿ) ಜಿಲ್ಲಾ ಮಟ್ಟದ ಸಮಿತಿಯ ಮೂರು ತಿಂಗಳಿಗೊಮ್ಮೆ ಸಭೆಯನ್ನು ಸೇರಿ, ಸಭೆಯ ದಿನಾಂಕದಿಂದ ೧೫ ದಿನಗಳೊಳಗಾಗಿ ರಾಜ್ಯ ಮಟ್ಟದ ಸಮಿತಿಗೆ ತನ್ನ ವರದಿಯನ್ನು ಸಲ್ಲಿಸತಕ್ಕದ್ದು.<br>(ಸಿ) ರಾಜ್ಯ ಮಟ್ಟದ ಸಮಿತಿಯು ಮೂರು ತಿಂಗಳಿಗೊಮ್ಮೆ ಸಭೆಯನ್ನು ಸೇರಿ, ಸಭೆಯ ದಿನಾಂಕದಿಂದ ೧೫ ದಿನಗಳೊಳಗಾಗಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸತಕ್ಕದ್ದು. | ೮. ಜಾರಿ ಪ್ರಾಧಿಕಾರಿಗಳ ಪ್ರಕಾರ್ಯಗಳು<br>(೧) (ಎ) ತಾಲ್ಲೂಕು ಮಟ್ಟದ ಸಮಿತಿ *ತಿಂಗಳಿಗೊಮ್ಮೆ* ಸಭೆ ನಡೆಸಿ ಕನ್ನಡ ಭಾಷೆಯ ಅನುಷ್ಠಾನದ ಕುರಿತು ಕೈಗೊಂಡಿರುವ ಕ್ರಮಗಳ ಬಗೆಗಿನ ತನ್ನ ವರದಿಯನ್ನು ಸಭೆಯ ದಿನಾಂಕದಿಂದ ೧೫ ದಿನಗಳೊಳಗಾಗಿ ಜಿಲ್ಲಾ ಮಟ್ಟದ ಸಮಿತಿಗೆ ಸಲ್ಲಿಸತಕ್ಕದ್ದು.<br>*(ಬಿ) ಜಿಲ್ಲಾ ಮಟ್ಟದ ಸಮಿತಿಯ ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ ಕನ್ನಡ ಭಾಷೆಯ ಅನುಷ್ಠಾನ ಕುರಿತು ಎಲ್ಲ ತಾಲ್ಲೂಕು ಮಟ್ಟದ ಸಮಿತಿಗಳು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಕೈಗೊಂಡ ಕ್ರಮಗಳ ಬಗೆಗಿನ ತನ್ನ ವರದಿಯನ್ನು ಸಭೆಯ ದಿನಾಂಕದಿಂದ ೧೫ ದಿನಗಳೊಳಗಾಗಿ ರಾಜ್ಯ ಮಟ್ಟದ ಸಮಿತಿಗೆ ಸಲ್ಲಿಸತಕ್ಕದ್ದು.*<br>ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (ಡಿ) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳು ಜಾರಿ ಅಧಿಕಾರಿಯು ಸಲ್ಲಿಸಿದ ವರದಿಯ ಮೇಲೆ ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (ಇ) ಜಿಲ್ಲಾ ಮಟ್ಟದ ಸಮಿತಿಗಳ ಸಂಚಾಲಕರಾಗಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಯೊಂದಿಗೆ ಸಮನ್ವಯ ಸಾಧಿಸಿ, ಮೇಲೆ ನಿರ್ದಿಷ್ಟಪಡಿಸಿದಂತೆ ಸಭೆಗಳನ್ನು ಆಯೋಜಿಸುವುದನ್ನು ಮತ್ತು ನಿಗದಿತ ಸಮಯದೊಳಗೆ ವರದಿಗಳು ರಾಜ್ಯ ಮಟ್ಟದ ಸಮಿತಿಗೆ ಸಲ್ಲಿಕೆಯಾಗುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೯. ಜಾರಿ ಅಧಿಕಾರಿಗಳ ನಿಯೋಜನೆ.–** (ಎ)ರಾಜ್ಯ ಸರ್ಕಾರದ ಗ್ರೂಪ್ 'ಎ' ದರ್ಜೆಗಿಂತ ಕಡಿಮೆ ಇರದ ಅಧಿಕಾರಿಯನ್ನು ಜಾರಿ ಅಧಿಕಾರಿಯನ್ನಾಗಿ ಗೊತ್ತುಪಡಿಸತಕ್ಕದ್ದು. ಆದಗ್ಯೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೇರಿರುವ ಗ್ರೂಪ್ 'ಬಿ' ದರ್ಜೆಯ ಅಧಿಕಾರಿಯನ್ನು ಆದ್ಯತೆಯ ಮೇರೆಗೆ ಜಾರಿ ಅಧಿಕಾರಿಯನ್ನಾಗಿ ಗೊತ್ತುಪಡಿಸತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (ಬಿ) ಜಾರಿ ಅಧಿಕಾರಿಯನ್ನು,–<br>(i) ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಸರ್ಕಾರಿ ಇಲಾಖೆಗಳ ಮತ್ತು ಶಾಸನಬದ್ಧ ಮಂಡಳಿಗಳು ಹಾಗೂ ನಿಗಮಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಜಿಲ್ಲಾಧಿಕಾರಿಗಳು; ಅಥವಾ<br>(ii) ಮಹಾನಗರ ಪಾಲಿಕೆ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆಯ ಆಯುಕ್ತರು; ಅಥವಾ<br>(iii) ಕೈಗಾರಿಕೆಗಳು, ಅಂಗಡಿಗಳು ಹಾಗೂ ವಾಣಿಜ್ಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರು – ಸಂದರ್ಭಾನುಸಾರ ನೇಮಕ ಮಾಡತಕ್ಕದ್ದು : | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ಪರಂತು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಯ ವ್ಯಾಪ್ತಿಗೆ ಸಂಬಂಧಿಸಿದಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಅಗತ್ಯ ಸಂಖ್ಯೆಯ ಜಾರಿ ಅಧಿಕಾರಿಗಳನ್ನು ನೇಮಕ ಮಾಡಬಹುದು. | (iv) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಯ ವ್ಯಾಪ್ತಿಗೆ ಸಂಬಂಧಿಸಿದಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಅಗತ್ಯ ಸಂಖ್ಯೆಯ ಜಾರಿ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು. |
| **೧೦. ಜಾರಿ ಅಧಿಕಾರಿಯ ಕರ್ತವ್ಯಗಳು.–** ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಗೊತ್ತುಪಡಿಸಲಾದ ಸಾಮಾನ್ಯ ಕ್ರಮಗಳ ಪಾಲನೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಜಾರಿ ಅಧಿಕಾರಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:– | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (i) ಅಧಿನಿಯಮದ ಪ್ರಕರಣ ೧೭ರ ಉಪಪ್ರಕರಣ (೧) ಮತ್ತು (೫) ರ ಮೇರೆಗೆ ಸರ್ಕಾರಿ ಇಲಾಖೆ ಹಾಗೂ ಸ್ಥಳೀಯ ಪ್ರಾಧಿಕಾರಗಳಲ್ಲಿ ನಿಯತಕಾಲಿಕ ಪರಿಶೀಲನೆ ನಡೆಸುವುದು.<br>(ii) ಅಧಿನಿಯಮದ ಪ್ರಕರಣ ೧೭ರ ಉಪಪ್ರಕರಣ (೬) ರಿಂದ (೧೦) ರವರೆಗಿನ ಪಾಲನೆಯನ್ನು ಖಚಿತಪಡಿಸಲು ನಿಯತಕಾಲಿಕ ಪರಿಶೀಲನೆ ನಡೆಸುವುದು.<br>(iii) ನಿಯಮಿಸಬಹುದಾದಂಥ ರೀತಿಯಲ್ಲಿ ಸಂಬಂಧಪಟ್ಟ ಸಮಿತಿಗಳಿಗೆ ಪರಿಶೀಲನಾ ವರದಿಗಳನ್ನು ಸಲ್ಲಿಸುವುದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೧೧. ಅಧಿಕೃತ ಭಾಷಾ ಜಾರಿ ನಿರ್ದೇಶನಾಲಯ.–** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು, ಅಧಿಕೃತ ಭಾಷಾ ಜಾರಿ ನಿರ್ದೇಶನಾಲಯವೂ ಸಹ ಆಗಿರತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೧೨. ಶಿಕ್ಷಣದಲ್ಲಿ ಕನ್ನಡ ಭಾಷೆ.–**<br>ರಾಜ್ಯದಲ್ಲಿರುವ ಎಲ್ಲಾ ಶಾಲೆಗಳಲ್ಲಿನ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷಾ ಕಲಿಕಾ ಅಧಿನಿಯಮ, ೨೦೧೫ (೨೦೧೫ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೨)ರ ಉಪಬಂಧಗಳ ಅನ್ವಯವಾಗುವುದು ಮುಂದುವರೆಯುತ್ತವೆ. | ೧೨. ಶಿಕ್ಷಣದಲ್ಲಿ ಕನ್ನಡ ಭಾಷೆ.–<br>ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| *ಹೊಸ ಸೇರ್ಪಡೆ* | *(ii) ಕನ್ನಡ ಶಾಲೆಗಳ ಪುನಶ್ಚೇತನ : ರಾಜ್ಯಾದ್ಯಂತ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಲು ಸಾಧ್ಯವಾಗದ ಕನ್ನಡ ಶಾಲೆಗಳನ್ನು ಗುರುತಿಸಿ, ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡುವ ನಿಟ್ಟಿನಲ್ಲಿ ಆದ್ಯತೆಯ ಮೇರೆಗೆ ಸರ್ಕಾರವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.* |
| **೧೩. ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣದಲ್ಲಿ ಕನ್ನಡ ಭಾಷೆ.–** (೧) ನೂತನ ಶಿಕ್ಷಣ ನೀತಿಯ ಅನುಸಾರ, ಉನ್ನತ, ತಾಂತ್ರಿಕ, ವೃತ್ತಿ ಶಿಕ್ಷಣ ವ್ಯಾಸಂಗದಲ್ಲಿ ಸಂಬಂಧಪ್ಪಟ ವಿಶ್ವವಿದ್ಯಾಲಯಗಳು ನಿಯಮಿಸಲಾದಂತೆ ವೃತ್ತಿಪರ ವ್ಯಾಸಂಗಕ್ಕೆ ಸಂಬಂಧಿಸಿದ ಕನ್ನಡ ಭಾಷೆಯ ಪ್ರಾಯೋಗಿಕ ಹಾಗೂ ಕಾರ್ಯಾತ್ಮಕ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಬೋಧಿಸತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (೨) ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಪಠ್ಯಕ್ರಮದಲ್ಲಿ ನಿಯಮಿಸಲಾದಂತೆ ಮೂಲ ಕನ್ನಡ ಭಾಷೆಯನ್ನೂ ಸಹ ಒಂದು ವಿಷಯವಾಗಿ ಬೋಧಿಸತಕ್ಕದ್ದು. | (೨) ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಪಠ್ಯಕ್ರಮದಲ್ಲಿ ನಿಯಮಿಸಲಾದಂತೆ ಕನ್ನಡ ಭಾಷೆಯನ್ನೂ ಸಹ ಒಂದು ವಿಷಯವಾಗಿ ಬೋಧಿಸತಕ್ಕದ್ದು. |
| ೧೪. ಉನ್ನತ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಲ್ಲಿ ಮೀಸಲಾತಿ.– ಕರ್ನಾಟಕದಲ್ಲಿ ಅಥವಾ ಇತರ ಯಾವುದೇ ರಾಜ್ಯದಲ್ಲಿ ಕನ್ನಡ ಮಾಧ್ಯಮದಲ್ಲಿ ೧ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಓದಿದ ವಿದ್ಯಾರ್ಥಿಗಳಿಗೆ ಉನ್ನತ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಶೇಕಡಾವಾರು ಪ್ರಮಾಣದಲ್ಲಿ ಮೀಸಲಾತಿಯನ್ನು ಒದಗಿಸತಕ್ಕದ್ದು. | ೧೪. ಉನ್ನತ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಲ್ಲಿ ಮೀಸಲಾತಿ.– ಕನ್ನಡ ಮಾಧ್ಯಮದಲ್ಲಿ ೧ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಓದಿದ ವಿದ್ಯಾರ್ಥಿಗಳಿಗೆ ಉನ್ನತ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಶೇಕಡಾವಾರು ಪ್ರಮಾಣದಲ್ಲಿ ಮೀಸಲಾತಿಯನ್ನು ಒದಗಿಸತಕ್ಕದ್ದು. |
| **೧೫. ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು ಮತ್ತು ರಾಜ್ಯ ಸರ್ಕಾರದ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ನಿಕಾಯಗಳು, ಸಹಕಾರಿ ಸಂಘಗಳು ಹಾಗೂ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯುವುದಕ್ಕಾಗಿ ಕನ್ನಡ ಭಾಷಾಜ್ಞಾನ ಅವಶ್ಯಕ.**– ರಾಜ್ಯ ಸರ್ಕಾರಿ ಉದ್ಯೋಗ ಅಥವಾ ರಾಜ್ಯ ಸರ್ಕಾರದ ಯಾವುದೇ ಸ್ಥಳೀಯ ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು, ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ನಿಕಾಯಗಳು ಅಥವಾ ನೋಂದಾಯಿತ ಸಹಕಾರ ಸಂಘಗಳು ಹಾಗೂ ಇತರ ಸಂಸ್ಥೆಗಳಲ್ಲಿ ಉದ್ಯೋಗವನ್ನು ಕೋರುವ ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಿದ ಇತರೆ ವಿದ್ಯಾರ್ಹತೆಗಳು ಅಥವಾ ಷರತ್ತುಗಳ ಜೊತೆಗೆ ಕರ್ನಾಟಕ ಲೋಕಸೇವಾ ಆಯೋಗ ಅಥವಾ ಈ ಬಗ್ಗೆ ಸರ್ಕಾರವು ಅಧಿಸೂಚಿಸಿದ ಯಾವುದೇ ಪ್ರಾಧಿಕಾರವು ನಡೆಸುವ, ೧೦ನೇ ತರಗತಿ ಅಥವಾ ಎಸ್.ಎಸ್.ಎಲ್.ಸಿ.ಯ ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆಗೆ ತತ್ಸಮಾನವಾದ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣನಾಗತಕ್ಕದ್ದು: | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ಪರಂತು, ಯಾವುದೇ ವ್ಯಕ್ತಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡು ಉತ್ತೀರ್ಣರಾಗಿದ್ದರೆ, ಅಂಥ ಕನ್ನಡ ಪರೀಕ್ಷೆಯಿಂದ ವಿನಾಯಿತಿಯನ್ನು ನೀಡಲಾಗುವುದು. | ಪರಂತು, ಯಾವುದೇ ವ್ಯಕ್ತಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡು ಉತ್ತೀರ್ಣರಾಗಿದ್ದರೆ, ಅಂಥ ಕನ್ನಡ ಪರೀಕ್ಷೆಯಿಂದ ವಿನಾಯಿತಿಯನ್ನು ನೀಡತಕ್ಕದ್ದು. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
| --- | --- |
| ೧೬. ನ್ಯಾಯಾಲಯಗಳಲ್ಲಿ ಕನ್ನಡ ಭಾಷೆ.- (೧) ಜಿಲ್ಲಾ ನ್ಯಾಯಾಲಯಗಳು ಅಥವಾ ಅಧಿವಿಚಾರಣಾ ನ್ಯಾಯಾಲಯಗಳು ಸಂದರ್ಭಾನುಸಾರ ಮತ್ತು ನ್ಯಾಯಾಧಿಕರಣಗಳು ತಮ್ಮ ಕಲಾಪಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ನಡೆಸತಕ್ಕದ್ದು ಹಾಗೂ ಆದೇಶಗಳು ಮತ್ತು ತೀರ್ಪುಗಳನ್ನು ಕನ್ನಡ ಭಾಷೆಯಲ್ಲಿ ಘೋಷಿಸತಕ್ಕದ್ದು: | ೧೬. ನ್ಯಾಯಾಲಯಗಳಲ್ಲಿ ಕನ್ನಡ ಭಾಷೆ.- (೧) ಜಿಲ್ಲಾ ನ್ಯಾಯಾಂಗದ ಎಲ್ಲ ನ್ಯಾಯಾಲಯಗಳು ಮತ್ತು ನ್ಯಾಯಾಧಿಕರಣಗಳು ಸಂದರ್ಭಾನುಸಾರ ತಮ್ಮ ಕಲಾಪಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ನಡೆಸತಕ್ಕದ್ದು ಹಾಗೂ ಆದೇಶಗಳು ಮತ್ತು ತೀರ್ಪುಗಳನ್ನು ಕನ್ನಡ ಭಾಷೆಯಲ್ಲಿಯೇ ಘೋಷಿಸತಕ್ಕದ್ದು. |
| ಪರಂತು, ಅಂಥ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಪೀಠಾಸೀನ ಅಧಿಕಾರಿಗಳು ಸಾಕ್ಷ್ಯವನ್ನು ಕನ್ನಡ ಭಾಷೆಯಲ್ಲಿ ದಾಖಲಿಸುವಾಗ ಅಗತ್ಯವಿರುವ ಕಡೆಗಳಲ್ಲಿ ಆಂಗ್ಲ ಪದಗಳು ಅಥವಾ ಪದಪುಂಜಗಳನ್ನು ಬಳಸಬಹುದು: | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ಮತ್ತು ಪರಂತು, ಉಚ್ಚ ನ್ಯಾಯಾಲಯವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಆಂಗ್ಲ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಲು ಪೀಠಾಸೀನ ಅಧಿಕಾರಿಗಳಿಗೆ ಅನುಮತಿಯನ್ನು ನೀಡಬಹುದು. | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೨) ಇತರ ಯಾವುದೇ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರದ ಎಲ್ಲಾ ಅರೆನ್ಯಾಯಿಕ ಕಾರ್ಯನಿರ್ವಾಹಕರ ಎಲ್ಲಾ ಆದೇಶಗಳು ಕನ್ನಡದಲ್ಲಿರತಕ್ಕದ್ದು. | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ಹೊಸ ಸೇರ್ಪಡೆ | (೩) ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು, ಆದೇಶಗಳು ರಾಜ್ಯದ ಅಧಿಕೃತ ಭಾಷೆ ಕನ್ನಡದಲ್ಲಿ ಬರುವಂತಾಗಲು ಭಾರತ ಸಂವಿಧಾನದ ಅನುಚ್ಛೇದ ೩೪೮ ಕ್ಕೆ ಸಂಸತ್ತು ಸೂಕ್ತ ತಿದ್ದುಪಡಿ ತರುವಂತಾಗುವಲ್ಲಿ ಕರ್ನಾಟಕ ಸರ್ಕಾರ ಅಗತ್ಯ ಪ್ರಕ್ರಿಯೆಯ ಮೂಲಕ ಕ್ರಮ ತೆಗೆದುಕೊಳ್ಳತಕ್ಕದ್ದು. |
| ೧೭. ಕನ್ನಡ ಭಾಷೆಯ ವ್ಯಾಪಕ ಬಳಕೆ ಮತ್ತು ಪ್ರಸಾರಕ್ಕಾಗಿ ಕೈಗೊಳ್ಳಬೇಕಾದ ಸಾಮಾನ್ಯ ಕ್ರಮಗಳು.- | ೧೭. ಕನ್ನಡ ಭಾಷೆಯ ವ್ಯಾಪಕ ಬಳಕೆ ಮತ್ತು ಪ್ರಸಾರಕ್ಕಾಗಿ ಕೈಗೊಳ್ಳಬೇಕಾದ ಸಾಮಾನ್ಯ ಕ್ರಮಗಳು.- |
| (೧) ರಾಜ್ಯ ಸರ್ಕಾರದ ಇಲಾಖೆಗಳು, ಉದ್ಯಮಗಳು ಅಥವಾ ಸ್ವಾಯತ್ತ ಸಂಸ್ಥೆಗಳು, ಸಹಕಾರ ಮತ್ತು ಸಾರ್ವಜನಿಕ ಉದ್ಯಮಗಳು, ಶೈಕ್ಷಣಿಕ ಸಂಸ್ಥೆಗಳು, ಬ್ಯಾಂಕುಗಳು, ಖಾಸಗಿ ಕೈಗಾರಿಕೆಗಳು, ಮತ್ತು ವಿಶ್ವವಿದ್ಯಾಲಯಗಳ ಫಲಕಗಳಲ್ಲಿರುವ ಹೆಸರುಗಳು, ಮತ್ತು ಸದರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಹೆಸರು ಮತ್ತು ಪದನಾಮಗಳನ್ನು ಸೂಚಿಸುವ ಫಲಕಗಳು ಪ್ರಮುಖವಾಗಿ ಕನ್ನಡದಲ್ಲಿ ಇರತಕ್ಕದ್ದು. | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
| --- | --- |
| (೨) ರಸ್ತೆಗಳು ಮತ್ತು ಬಡಾವಣೆ ಪ್ರವೇಶಗಳ ಹೆಸರುಗಳೂ ಸೇರಿದಂತೆ ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳ ಮತ್ತು ಸ್ಥಳೀಯ ಪ್ರಾಧಿಕಾರಗಳ ಮೇಲ್ವಿಚಾರಣೆಯಲ್ಲಿ ಹಾಕಲಾಗಿರುವ ಫಲಕಗಳ ಮೇಲೆ ಪ್ರದರ್ಶಿಸಲಾಗುವ ವಿವರಗಳು ಪ್ರಮುಖವಾಗಿ ಕನ್ನಡದಲ್ಲಿ ಇರತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೩) ಕನಾಟಕದಲ್ಲಿ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಪ್ರಕಟಣೆಗಾಗಿ ಹೊರಡಿಸಿದ ಎಲ್ಲಾ ಟೆಂಡರ್ ಅಧಿಸೂಚನೆ, ಜಾಹೀರಾತು, ಅರ್ಜಿ ನಮೂನೆ, ಡಿಜಿಟಲ್ ನಮೂನೆ, ಪ್ರಮಾಣ ಪತ್ರ ಮತ್ತು ಅಧಿಸೂಚನೆಗಳು ಪ್ರಮುಖವಾಗಿ ಕನ್ನಡದಲ್ಲಿ ಇರತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೪) ಸರ್ಕಾರ, ಸ್ಥಳೀಯ ಪ್ರಾಧಿಕಾರ, ಅನುದಾನಿತ ಅಥವಾ ಅನುದಾನರಹಿತ ಸಂಸ್ಥೆ ನಡೆಸುವ ಕಾರ್ಯಕ್ರಮಗಳ ಕುರಿತ ಕರಪತ್ರ, ಬ್ಯಾನರು, ಫ್ಲೆಕ್ಸ್, ಎಲೆಕ್ಟ್ರಾನಿಕ್ ಪ್ರದರ್ಶನ ಫಲಕ, ಮಾಹಿತಿಗಳು, ನೋಟೀಸುಗಳು ಇತ್ಯಾದಿ ಪ್ರಮುಖವಾಗಿ ಕನ್ನಡದಲ್ಲಿ ಇರತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೫) ಸರ್ಕಾರವು ಕೈಗೊಂಡಂತಹ ಅಥವಾ ಸರ್ಕಾರ ಅಥವಾ ಸಂಬಂಧಿತ ಸಂಸ್ಥೆಗಳು ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಯಾವುದೇ ರೀತಿಯ ಪ್ರತಿಫಲ, ಅನುದಾನ, ರಿಯಾಯಿತಿ ಪಡೆದು ಅನುಷ್ಠಾನಗೊಳಿಸುತ್ತಿರುವ ಯಾವುದೇ ಯೋಜನೆಗೆ ಸಂಬಂಧಿಸಿದ ಫಲಕ, ಜಾಹೀರಾತು, ರಸೀದಿ, ಬಿಲ್ಲು ನೋಟೀಸುಗಳು ಇತ್ಯಾದಿ ಪ್ರಮುಖವಾಗಿ ಕನ್ನಡದಲ್ಲಿ ಇರತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೬) ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರಗಳ ಅನುಮೋದನೆ ಮತ್ತು ಮಂಜೂರಾತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ಕೈಗಾರಿಕೆ ಮತ್ತು ವ್ಯಾಪಾರ ಸಂಸ್ಥೆ, ನ್ಯಾಸಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೋಟೆಲ್ ಮುಂತಾದವುಗಳ ಹೆಸರನ್ನು ಪ್ರದರ್ಶಿಸುವ ಫಲಕಗಳ ಮೇಲಿನ ಅರ್ಧ ಭಾಗವು ಕನ್ನಡದಲ್ಲಿ ಇರತಕ್ಕದ್ದು ಮತ್ತು ಕೆಳಗಿನ ಅರ್ಧ ಭಾಗವು ಬೇರೆ ಯಾವುದೇ ಭಾಷೆಯಲ್ಲಿ ಇರಬಹುದು. | (೬) ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರಗಳ ಅನುಮೋದನೆ ಮತ್ತು ಮಂಜೂರಾತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ಕೈಗಾರಿಕೆ ಮತ್ತು ವ್ಯಾಪಾರ ಸಂಸ್ಥೆ, ನ್ಯಾಸಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೋಟೆಲ್ ಮುಂತಾದವುಗಳ ಹೆಸರನ್ನು ಪ್ರದರ್ಶಿಸುವ *ಫಲಕಗಳ ಮೇಲಿನ ಶೇಕಡಾ ೬೦ ರಷ್ಟು ಭಾಗವು ಕನ್ನಡದಲ್ಲಿ ಇರತಕ್ಕದ್ದು ಮತ್ತು ಉಳಿದ ಶೇಕಡಾ ೪೦ ರಷ್ಟು ಭಾಗದಲ್ಲಿ ಕನ್ನಡ ಸಹೋದರ ಭಾಷೆಗಳಾದ ತುಳು, ಕೊಡವ, ಕೊಂಕಣಿ ಸೇರಿದಂತೆ ಉಳಿದ ಭಾಷೆಗಳನ್ನು, ಶೇಕಡಾ ೨೦ ರಷ್ಟು ಹಾಗೂ ಮಿಕ್ಕುಳಿದ ಶೇಕಡಾ ೨೦ ರಷ್ಟು ಭಾಗದಲ್ಲಿ ಸಂಪರ್ಕ ಭಾಷೆಯಾದ ಇಂಗ್ಲಿಷ್ ಸೇರಿದಂತೆ ಬೇರೆ ಯಾವುದೇ ಭಾಷೆಯನ್ನು ಉಪಯೋಗಿಸಬಹುದು.* |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (೭) ರಾಜ್ಯದೊಳಗೆ ತಯಾರಿಸಿದ ಮತ್ತು ಮಾರಾಟವಾಗುವ ಎಲ್ಲಾ ಕೈಗಾರಿಕಾ ಮತ್ತು ಇತರ ಗ್ರಾಹಕ ಉತ್ಪನ್ನಗಳ ಹೆಸರು ಮತ್ತು ಅವುಗಳ ಬಳಕೆಯ ಕುರಿತಾದ ನಿರ್ದೇಶನಗಳು ಯಾವುದಾದರೂ ಇದ್ದಲ್ಲಿ ಯಾವುದೇ ಇತರ ಭಾಷೆಯ ಜೊತೆಗೆ ಕನ್ನಡದಲ್ಲಿ ಇರತಕ್ಕದ್ದು. | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೮) ರಾಜ್ಯದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾದ ಜಾಹೀರಾತು ಮತ್ತು ಸೂಚನೆಗಳನ್ನು ಪ್ರದರ್ಶಿಸುವ ಎಲ್ಲಾ ಫಲಕಗಳಲ್ಲಿ ವಿಷಯಗಳ ನಿಗದಿತ ಶೇಕಡಾವಾರು ಪ್ರಮಾಣವು ಕನ್ನಡ ಭಾಷೆಯಲ್ಲಿರತಕ್ಕದ್ದು. ಜಾಹೀರಾತುಗಳ ವರ್ಗೀಕರಣ ಮತ್ತು ಕನ್ನಡದಲ್ಲಿ ಪ್ರದರ್ಶಿಸಬೇಕಾದ ಜಾಹೀರಾತು ವಿಷಯಗಳ ಶೇಕಡಾವಾರು ಪ್ರಮಾಣವು ರಾಜ್ಯ ಸರ್ಕಾರದಿಂದ ನಿಗದಿಪಡಿಸಿದಂತೆ ಇರತಕ್ಕದ್ದು. | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೯) ರಾಜ್ಯದೊಳಗಿನ ೧೦೦ಕ್ಕಿಂತಲೂ ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಒಡೆತನದ ಪ್ರತಿಯೊಂದು ಕೈಗಾರಿಕಾ ಸಂಸ್ಥೆ, ಸಾರ್ವಜನಿಕ ವಲಯ ಉದ್ಯಮ, ಬ್ಯಾಂಕ್ ಮತ್ತು ಖಾಸಗಿ ಕೈಗಾರಿಕೆಗಳು,- | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (ಎ) ಸಂಸ್ಥೆಯ ದಿನನಿತ್ಯದ ಕಾರ್ಯ ಅಥವಾ ಪ್ರಕಾರ್ಯಗಳ ಹಾಗೂ ನಿಯಮಿಸಬಹುದಾದಂಥ ಇತರೆ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಕನ್ನಡ ಭಾಷೆಯ ಬಳಕೆಯ ಉದ್ದೇಶಕ್ಕಾಗಿ 'ಕನ್ನಡ ಕೋಶ'ವನ್ನು ಸ್ಥಾಪಿಸತಕ್ಕದ್ದು. | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (ಬಿ) ಕನ್ನಡ ಭಾಷೆ ಮಾತನಾಡಲು ಬಾರದಿರುವ ಉದ್ಯೋಗಿಗಳಿಗಾಗಿ ವ್ಯವಹಾರಿಕ ಕನ್ನಡ ಭಾಷೆ ಪರಿಚಯಿಸಲು "ಕನ್ನಡ ಕಲಿಕಾ ಘಟಕ" (ಪ್ರಾಥಮಿಕ ಕನ್ನಡ ಬೋಧನ ಘಟಕ) ವನ್ನು ಸ್ಥಾಪಿಸತಕ್ಕದ್ದು. ಇದಕ್ಕಾಗಿ ಅಂಥ ಸಂಸ್ಥೆಗಳ ಕೋರಿಕೆಯ ಮೇರೆಗೆ ಅವರ ಖರ್ಚಿನಲ್ಲಿ ಸರ್ಕಾರವು ಅಗತ್ಯ ಬೋಧಕ ಸಿಬ್ಬಂದಿ ಮತ್ತು ಕಲಿಕಾ ಸಾಮಗ್ರಿಯನ್ನು ಒದಗಿಸತಕ್ಕದ್ದು. | ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೧೦) ಕರ್ನಾಟಕ ರಾಜ್ಯದೊಳಗಿನ ಬ್ಯಾಂಕುಗಳಲ್ಲಿ ಮತ್ತು ಇತರ ಹಣಕಾಸು ಸಂಸ್ಥೆಗಳಲ್ಲಿ ಉದ್ಯೋಗಿಯಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಸಾರ್ವಜನಿಕರೊಂದಿಗಿನ ತನ್ನ ಎಲ್ಲಾ ಸಂಪರ್ಕ ಹಾಗೂ ಪತ್ರ ವ್ಯವಹಾರದಲ್ಲಿ ಕನ್ನಡ ಭಾಷೆಯನ್ನು ಬಳಸತಕ್ಕದ್ದು. | (೧೦) ಕರ್ನಾಟಕ ರಾಜ್ಯದೊಳಗಿನ ಬ್ಯಾಂಕುಗಳಲ್ಲಿ ಮತ್ತು ಇತರ ಹಣಕಾಸು ಸಂಸ್ಥೆಗಳಲ್ಲಿ ಉದ್ಯೋಗಿಯಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಸಾರ್ವಜನಿಕರೊಂದಿಗಿನ ತನ್ನ ಎಲ್ಲಾ ಸಂಪರ್ಕದ ವ್ಯವಹಾರದಲ್ಲಿ ಕನ್ನಡ ಭಾಷೆಯನ್ನು ಬಳಸತಕ್ಕದ್ದು. |
| *ಹೊಸ ಸೇರ್ಪಡೆ* | *(೧೧) ಯಾವುದೇ ಬ್ಯಾಂಕಿನ ಅಥವಾ ಹಣಕಾಸು ಸಂಸ್ಥೆಯ ಗ್ರಾಹಕ ತನ್ನ ಖಾತೆಯ ನಿರ್ವಹಣೆಯಲ್ಲಿ ಕನ್ನಡ ಭಾಷೆಯನ್ನು ಬಳಸಿದರೆ, ಸಂಬಂಧಿಸಿದ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆ ಅದನ್ನು ಮಾನ್ಯ ಮಾಡತಕ್ಕದ್ದು.* |
| *ಹೊಸ ಸೇರ್ಪಡೆ* | *(೧೨) ಎಲ್ಲಾ ಸರ್ಕಾರಿ / ಖಾಸಗಿ / ಕಚೇರಿಗಳು ಹಾಗೂ ಉದ್ದಿಮೆಗಳೂ ಸೇರಿದಂತೆ ಸಾರ್ವಜನಿಕರ ಸಂಪರ್ಕಕ್ಕೆ ಬರುವ ಎಲ್ಲೆಡೆ ಕನ್ನಡದಲ್ಲಿ ಸೇವೆಯನ್ನು ಕೊಡತಕ್ಕದ್ದು.* |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| **೧೮. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಬಳಕೆಗಾಗಿ ಕೈಗೊಳ್ಳಬೇಕಾದ ಕ್ರಮಗಳು.–** (೧) ಈ–ಆಡಳಿತ ಇಲಾಖೆಯು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಸಮರ್ಥ ಬಳಕೆಗಾಗಿ ಮುಕ್ತ ಮೂಲ ತಂತ್ರಾಂಶ ಮತ್ತು ಪರಿಕರಗಳನ್ನು ಅಭಿವೃದ್ಧಿಪಡಿಸತಕ್ಕದ್ದು. | **ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| (೨) ಸರ್ಕಾರದ ವಿವಿಧ ಇಲಾಖೆಗಳ, ಸ್ಥಳೀಯ ಪ್ರಾಧಿಕಾರಗಳ, ಅರೆ–ಸರ್ಕಾರಿ ಸಂಸ್ಥೆಗಳ, ಸಾರ್ವಜನಿಕ ವಲಯದ ಉದ್ಯಮಗಳ, ಸ್ವಾಯತ್ತ ಸಂಸ್ಥೆಗಳ, ಸಹಕಾರ ಸಂಘ ಇತ್ಯಾದಿಗಳ ಜಾಲತಾಣಗಳಲ್ಲಿ ಮಾಹಿತಿಯನ್ನು ಯುನಿಕೋಡ್ ಅಥವಾ ಕಾಲಕಾಲದಲ್ಲಿ ಲಭ್ಯವಿರುವ ತಂತ್ರಜ್ಞಾನದಲ್ಲಿ, ಕನ್ನಡದಲ್ಲಿಯೂ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅದರೊಂದಿಗೆ ಬಳಸಲಾಗುವ ಯಾವುದೇ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಜಾಲತಾಣವನ್ನು ಮಾರ್ಪಾಡು ಮಾಡತಕ್ಕದ್ದು. | (೨) ಸರ್ಕಾರದ ವಿವಿಧ ಇಲಾಖೆಗಳ, ಸ್ಥಳೀಯ ಪ್ರಾಧಿಕಾರಗಳ, ಅರೆ–ಸರ್ಕಾರಿ ಸಂಸ್ಥೆಗಳ, ಸಾರ್ವಜನಿಕ ವಲಯದ ಉದ್ಯಮಗಳ, ಸ್ವಾಯತ್ತ ಸಂಸ್ಥೆಗಳ, ಸಹಕಾರ ಸಂಘ ಇತ್ಯಾದಿಗಳ ಜಾಲತಾಣಗಳಲ್ಲಿ ಮಾಹಿತಿಯನ್ನು ಯುನಿಕೋಡ್ ಅಥವಾ ಕಾಲಕಾಲದಲ್ಲಿ ಲಭ್ಯವಿರುವ ತಂತ್ರಜ್ಞಾನದಲ್ಲಿ, ***ಮೊದಲ ಆಯ್ಕೆಯಾಗಿ ಕನ್ನಡದಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.*** |
| (೩) ಸರ್ಕಾರಿ ಇಲಾಖೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಇ–ಟೆಂಡರು ಮತ್ತು ಇ–ಆಡಳಿತ ಯೋಜನೆಗಳಲ್ಲಿ ಕನ್ನಡದ ಬಳಕೆಗಾಗಿ ಸೌಲಭ್ಯವನ್ನು ಸಹ ಲಭ್ಯವಿರುವಂತೆ ಮಾಡತಕ್ಕದ್ದು. | **ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| (೪) ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಭಿವೃದ್ಧಿಪಡಿಸಿದ ಎಲ್ಲಾ ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಅನ್ವಯಿಕೆಗಳು ಕನ್ನಡದಲ್ಲಿಯೂ ಇರತಕ್ಕದ್ದು. ಎಲ್ಲಾ ವಿದ್ಯುನ್ಮಾನ ಅರ್ಜಿ ನಮೂನೆಗಳು, ಸಂದೇಶಗಳು, ಪತ್ರ ಮುಂತಾದವುಗಳು ಸಹ ಕನ್ನಡದಲ್ಲಿ ಇರತಕ್ಕದ್ದು. | **ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| ೧೯. ಕನ್ನಡ ಭಾಷೆಯ ಅಭಿವೃದ್ಧಿಗೆ ಪರೋತ್ಸಾಹಕಗಳು.– ಇ–ಆಡಳಿತ ಇಲಾಖೆಯಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಪರಿಣಾಮಕಾರಿ ಅಭಿವೃದ್ಧಿಗಾಗಿ ಸರ್ಕಾರಕ್ಕೆ ಸೃಜನಾತ್ಮಕ ಸಲಹೆಗಳನ್ನು ನೀಡುವ ವ್ಯಕ್ತಿಗಳಿಗೆ ಪ್ರೋತ್ಸಾಹವನ್ನು ನೀಡಲು ಯೋಜನೆಯನ್ನು ರೂಪಿಸತಕ್ಕದ್ದು. | **ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ.** |
| **೨೦. ವಿನಾಯಿತಿ ಮತ್ತು ತೆರಿಗೆ ರಿಯಾಯಿತಿ ಅಥವಾ ತೆರಿಗೆ ಮುಂದೂಡಿಕೆ ಪಡೆಯುವ ಹಕ್ಕು.–** (೧) ಯಾವುದೇ ಖಾಸಗಿ ಉದ್ಯಮ, ಕಾರ್ಯಸಂಸ್ಥೆ ಅಥವಾ ಸಂಸ್ಥೆಯು, ರಾಜ್ಯ ಸರ್ಕಾರವು ಅಧಿಸೂಚಿಸಿದ ಕೈಗಾರಿಕಾ ಯಾವುದೇ ಖಾಸಗಿ ಉದ್ಯಮ, ಕಾರ್ಯಸಂಸ್ಥೆ ಅಥವಾ ಸಂಸ್ಥೆಯು, ರಾಜ್ಯ ಸರ್ಕಾರವು ಅಧಿಸೂಚಿಸಿದ ಕೈಗಾರಿಕಾ ನೀತಿಯ ಅನುಸಾರವಾಗಿ ಕನ್ನಡಿಗರಿಗೆ ನಿಗದಿಪಡಿಸಿದ ಶೇಕಡಾವಾರು ಪ್ರಮಾಣಕ್ಕಿಂತ ಕಡಿಮೆಯಲ್ಲದ ಮೀಸಲಾತಿಯನ್ನು ಕಲ್ಪಿಸಿದ ಹೊರತು ಭೂ–ರಿಯಾಯಿತಿ, ಯಾವುದೇ ಇತರೆ ವಿನಾಯಿತಿ ಅಥವಾ ತೆರಿಗೆ ರಿಯಾಯಿತಿ ಅಥವಾ ತೆರಿಗೆ ಮುಂದೂಡಿಕೆಯನ್ನು ಅಥವಾ ಯಾವುದೇ ಬಗೆಯ ಸಹಾಯಾನುದಾನವನ್ನು ಪಡೆಯಲು **ಹಕ್ಕುಳ್ಳವರಾಗಿರತಕ್ಕದ್ದಲ್ಲ.** | ೨೦. ವಿನಾಯಿತಿ ಮತ್ತು ತೆರಿಗೆ ರಿಯಾಯಿತಿ ಅಥವಾ ತೆರಿಗೆ ಮುಂದೂಡಿಕೆ ಪಡೆಯುವ ಹಕ್ಕು.– (೧) ಯಾವುದೇ ಖಾಸಗಿ ಉದ್ಯಮ, ಕಾರ್ಯಸಂಸ್ಥೆ ಅಥವಾ ಸಂಸ್ಥೆಯು, ರಾಜ್ಯ ಸರ್ಕಾರವು ಅಧಿಸೂಚಿಸಿದ ಕೈಗಾರಿಕಾ ಯಾವುದೇ ಖಾಸಗಿ ಉದ್ಯಮ, ಕಾರ್ಯಸಂಸ್ಥೆ ಅಥವಾ ಸಂಸ್ಥೆಯು, ರಾಜ್ಯ ಸರ್ಕಾರವು ಅಧಿಸೂಚಿಸಿದ ಕೈಗಾರಿಕಾ ನೀತಿಯ ಅನುಸಾರವಾಗಿ ಕನ್ನಡಿಗರಿಗೆ ನಿಗದಿಪಡಿಸಿದ ಶೇಕಡಾವಾರು ಪ್ರಮಾಣಕ್ಕಿಂತ ಕಡಿಮೆಯಲ್ಲದ ಮೀಸಲಾತಿಯನ್ನು ಕಲ್ಪಿಸಿದ ಹೊರತು ಭೂ–ರಿಯಾಯಿತಿ, ಯಾವುದೇ ಇತರೆ ವಿನಾಯಿತಿ ಅಥವಾ ತೆರಿಗೆ ರಿಯಾಯಿತಿ ಅಥವಾ ತೆರಿಗೆ ಮುಂದೂಡಿಕೆಯನ್ನು ಅಥವಾ ಯಾವುದೇ ಬಗೆಯ ಸಹಾಯಾನುದಾನವನ್ನು ಪಡೆಯಲು ***ಅರ್ಹವಾಗಿರತಕ್ಕದ್ದಲ್ಲ.*** |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| (೨) ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವುದಕ್ಕಾಗಿ ಗೊತ್ತುಪಡಿಸಿದ ರಾಜ್ಯದ ಕೈಗಾರಿಕಾ ನೀತಿಯನ್ನು ಪಲಿಸುವುದಕ್ಕೆ ಬದ್ಧವಾದ ಯಾವುದೇ ಉದ್ಯಮವು ತನ್ನ ಬಾಧ್ಯತೆಯನ್ನು ಈಡೇರಿಸಲು ವಿಫಲವಾದಲ್ಲಿ ಎಲ್ಲಾ ಸೌಲಭ್ಯಗಳನ್ನು ಎಂದರೆ, ವಿನಾಯಿತಿಗಳು ಮತ್ತು ತೆರಿಗೆ ರಿಯಾಯಿತಿ ಅಥವಾ ತೆರಿಗೆ ಮುಂದೂಡಿಕೆ ಅಥವಾ ಯಾವುದೇ ರೀತಿಯ ಸಹಾಯಾನುದಾನವನ್ನು ಭವಿಷ್ಯದಲ್ಲಿ ಮುಂದುವರಿಸುವುದಕ್ಕೆ ಅನರ್ಹವಾಗತಕ್ಕದ್ದು ಮತ್ತು ಅದನ್ನು ವಸೂಲು ಮಾಡುವುದಕ್ಕಾಗಿಯೂ ಸಹ ಹೊಣೆಯಾಗತಕ್ಕದ್ದು. ಸದರಿ ಉದ್ಯಮಕ್ಕೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶ ನೀಡಿದ ತರುವಾಯ ಮಾತ್ರವೇ ಅಂಥ ಅನರ್ಹತೆಗೆ ಒಳಗಾಗತಕ್ಕದ್ದು. | (೨) ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವುದಕ್ಕಾಗಿ ಗೊತ್ತುಪಡಿಸಿದ ರಾಜ್ಯದ ಕೈಗಾರಿಕಾ ನೀತಿಯನ್ನು ಪಲಿಸುವುದಕ್ಕೆ ಬದ್ಧವಾದ ಯಾವುದೇ ಉದ್ಯಮವು ತನ್ನ ಬಾಧ್ಯತೆಯನ್ನು ಈಡೇರಿಸಲು ವಿಫಲವಾದಲ್ಲಿ ಎಲ್ಲಾ ಸೌಲಭ್ಯಗಳನ್ನು ಎಂದರೆ, ವಿನಾಯಿತಿಗಳು ಮತ್ತು ತೆರಿಗೆ ರಿಯಾಯಿತಿ ಅಥವಾ ತೆರಿಗೆ ಮುಂದೂಡಿಕೆ ಅಥವಾ ಯಾವುದೇ ರೀತಿಯ ಸಹಾಯಾನುದಾನವನ್ನು ಭವಿಷ್ಯದಲ್ಲಿ ಮುಂದುವರಿಸುವುದಕ್ಕೆ ಅನರ್ಹವಾಗತಕ್ಕದ್ದು. ಸದರಿ ಉದ್ಯಮಕ್ಕೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶ ನೀಡಿದ ತರುವಾಯ ಮಾತ್ರವೇ ಅಂಥ ಅನರ್ಹತೆಗೆ ಒಳಗಾಗತಕ್ಕದ್ದು.<br>(ಅದನ್ನು ವಸೂಲು ಮಾಡುವುದಕ್ಕಾಗಿಯೂ ಸಹ ಹೊಣೆಯಾಗತಕ್ಕದ್ದು – ಎಂಬುದನ್ನು ಕೈಬಿಟ್ಟದೆ) |
| (೩) ರಾಜ್ಯ ಸರ್ಕಾರದ ಆರ್ಥಿಕ ಇಲಾಖ ಮತ್ತು ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಗಳು ಮೇಲ್ಕಂಡ (೧) ಮತ್ತು (೨)ನೇ ಉಪಪ್ರಕರಣದ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಪಡಿಸತಕ್ಕದ್ದು. ಈ ಬಗೆಗಿನ ವಾರ್ಷಿಕ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು ಇಲಾಖೆಯ ಜಾಲತಾಣದಲ್ಲಿ ಅಪ್‌ಲೋಡ್ ಮಾಡತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೪) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು, ರಾಜ್ಯದಿಂದ ಪ್ರೋತ್ಸಾಹಕ/ರಿಯಾಯಿತಿಗಳನ್ನು ಪಡೆದಿರುವ ಸಂಸ್ಥೆಯ ವಿವರಗಳನ್ನು ಮತ್ತು ಕೈಗಾರಿಕಾ ನೀತಿಯ ಪ್ರಕಾರ ಕನ್ನಡಿಗರಿಗೆ ಒದಗಿಸಲಾದ ಉದ್ಯೋಗದ ವಿವರಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು ಮತ್ತು ಇಲಾಖಾ ಜಾಲತಾಣದಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೫) ಅಪ್ರೆಂಟಿಸ್ ಅಧಿನಿಯಮ, ೧೯೬೧ರ ಮೇರೆಗೆ ಕಾರ್ಯನಿರ್ವಹಿಸುವ ಎಲ್ಲಾ ಕೈಗಾರಿಕೆಗಳು ಅಪ್ರೆಂಟಿಸ್ ತರಬೇತಿಯನ್ನು ನೀಡುವಲ್ಲಿ ಕನ್ನಡಿಗರಿಗೆ ಆದ್ಯತೆಯನ್ನು ನೀಡಬೇಕು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೬) ಕೈಗಾರಿಕಾ ನೀತಿಯ ಪ್ರಕಾರ ರಿಯಾಯಿತಿ/ಪ್ರೋತ್ಸಾಹಕಗಳನ್ನು ಪಡೆದಿರುವ ಮತ್ತು ೧೦೦ಕ್ಕಿಂತ ಹೆಚ್ಚು ಉದ್ಯೋಗಿಗಳಿರುವ ಎಲ್ಲಾ ಕೈಗಾರಿಕೆಗಳಲ್ಲಿ ಪ್ರಕರಣ ೯ರ (ಬಿ) ಖಂಡದ ಉಪಖಂಡ (iii)ರ ಮೇರೆಗೆ ನಿಯೋಜಿಸಿದ ಜಾರಿ ಅಧಿಕಾರಿಯು ನೋಡಲ್ ಅಧಿಕಾರಿಯಾಗಿರತಕ್ಕದ್ದು. ನೋಡಲ್ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಿರುವಂತೆ ಕನ್ನಡ ಭಾಷೆಯ ಅನುಷ್ಠಾನ/ ಅನುಸರಣೆಗಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ಜಿಲ್ಲಾಮಟ್ಟದ ಸಮಿತಿಗೆ ತ್ರೈಮಾಸಿಕ ವರದಿಯನ್ನು ಸಲ್ಲಿಸತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| **೨೧. ಉದ್ಯೋಗ ಪೋರ್ಟಲ್.**– ರಾಜ್ಯ ಸರ್ಕಾರವು ಸರ್ಕಾರಿ ಕಚೇರಿ, ಸಂಸ್ಥೆ, ಸ್ಥಳೀಯ ಪ್ರಾಧಿಕಾರ, ಸಾರ್ವಜನಿಕ ಉದ್ದಿಮೆ, ಖಾಸಗಿ ಕೈಗಾರಿಕೆ, ಕೈಗಾರಿಕಾ ಸಂಸ್ಥೆ ಮತ್ತು ಅವುಗಳ ಕರ್ನಾಟಕದಲ್ಲಿನ ನೇಮಕಾತಿ ಏಜೆನ್ಸಿಗಳಿಗಾಗಿ ಒಂದು ಉದ್ಯೋಗ ಪೋರ್ಟಲ್ ಅನ್ನು ಸ್ಥಾಪಿಸತಕ್ಕದ್ದು ಅಂಥ ಉದ್ಯೋಗಕ್ಕಾಗಿ ನಿಯಮಿಸಿದ ಕನ್ನಡ ಜ್ಞಾನದ ವಿವರಗಳ ಸಹಿತ ಭರ್ತಿ ಮಾಡಬೇಕಾದ ಖಾಲಿ ಸ್ಥಾನಗಳು ಮತ್ತು ಉದ್ಯೋಗಗಳನ್ನು ಅಂಥ ಉದ್ಯೋಗ ಪೋರ್ಟಲ್‌ನಲ್ಲಿ ಅಧಿಸೂಚಿಸತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೨೨. ಸರ್ಕಾರಿ ಅಧಿಕಾರಿಗಳು ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ವಿಫಲವಾದಲ್ಲಿ ದಂಡನೆ.**– (೧) ಅಧಿಕೃತ ಭಾಷೆಯನ್ನು ಜಾರಿಗೊಳಿಸುವ ಕರ್ತವ್ಯವನ್ನು ವಹಿಸಿಕೊಂಡ ಸರ್ಕಾರಿ ಅಧಿಕಾರಿಯು ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ವಿಫಲವಾದರೆ, ಅಂಥ ವಿಫಲತೆಯನ್ನು ಕರ್ತವ್ಯಚ್ಯುತಿ ಎಂದು ಭಾವಿಸತಕ್ಕದ್ದು ಮತ್ತು ಪ್ರಾಧಿಕಾರವು ನಿರ್ಧರಿಸಬಹುದಾದಂಥ ಶಿಸ್ತುಕ್ರಮಕ್ಕೆ ಗುರಿಯಾಗತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೨) ಅಧಿಕೃತ ಮತ್ತು ಆಡಳಿತಾತ್ಮಕ ವ್ಯವಹಾರಗಳಲ್ಲಿ ಕನ್ನಡ ಭಾಷೆಯನ್ನು ಬಳಸುವಲ್ಲಿ ಸರ್ಕಾರಿ ಅಧಿಕಾರಿಗಳ ಕಡೆಯಿಂದ ಆಗುವ ವೈಫಲ್ಯವನ್ನು ಕರ್ತವ್ಯ ಲೋಪವೆಂದು ಭಾವಿಸತಕ್ಕದ್ದು ಮತ್ತು ಅವರ ವಿರುದ್ಧ ಅಗತ್ಯ ಶಿಸ್ತು ಕ್ರಮಕ್ಕಾಗಿ ಆಯಾ ಸಮಿತಿಗಳು ರಾಜ್ಯಮಟ್ಟದ ಸಮಿತಿಗೆ ವರದಿ ಮಾಡತಕ್ಕದ್ದು.<br>ಪರಂತು, ಅಂಥ ಶಿಸ್ತು ಕ್ರಮ ತೆಗೆದುಕೊಳ್ಳುವ ಮುಂಚೆ ಸಂಬಂಧಪಟ್ಟ ಅಧಿಕಾರಿ ಅಥವಾ ನೌಕರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೨೩. ಖಾಸಗಿ ವ್ಯಕ್ತಿಗಳಿಂದ ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.**– ಯಾವುದೇ ಕೈಗಾರಿಕೆ, ಅಂಗಡಿ, ಫರ್ಮ್ ಮತ್ತು ವಾಣಿಜ್ಯ ಸಂಸ್ಥೆಯ ಮಾಲೀಕ ಅಥವಾ ಅದರ ಉಸ್ತುವಾರಿ ವ್ಯಕ್ತಿಗಳು ಈ ಅಧಿನಿಯಮದ ಪ್ರಕರಣ ೧೭ರ (೬) ರಿಂದ (೧೦)ರವರೆಗಿನ ಉಪಪ್ರಕರಣಗಳ ಉಪಬಂಧಗಳನ್ನು ಪಾಲಿಸಲು ವಿಫಲವಾದರೆ ಈ ಕೆಳಗೆ ಸೂಚಿಸಿದ ಜುಲ್ಮಾನೆಗೆ ಗುರಿಯಾಗತಕ್ಕದ್ದು.<br>(i) ಮೊದಲನೆಯ ಅಪರಾಧಕ್ಕಾಗಿ ರೂ. ೫,೦೦೦/–ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ<br>(ii) ಎರಡನೆಯ ಅಪರಾಧಕ್ಕಾಗಿ ರೂ. ೧೦,೦೦೦/–ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ.<br>(iii) ನಂತರದ ಪ್ರತಿಯೊಂದು ಅಪರಾಧಕ್ಕಾಗಿ ರೂ. ೨೦,೦೦೦/– ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಮತ್ತು ಪರವಾನಗಿಯನ್ನು ಸಹ ರದ್ದುಗೊಳಿಸುವುದಕ್ಕೆ ಗುರಿಯಾಗತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
| --- | --- |
| ವಿವರಣೆ : ಈ ಉದ್ದೇಶಕ್ಕಾಗಿ, ಜಾರಿ ಅಧಿಕಾರಿಯು ಯಾವುದೇ ಕ್ರಮವನ್ನು ಕೈಗೊಳ್ಳುವ ಮುಂಚೆ ಅಧಿನಿಯಮದ ಉಲ್ಲಂಘನೆಗಾಗಿ ಕಾರಣ ಕೇಳುವ ನೋಟೀಸನ್ನು ನೀಡತಕ್ಕದ್ದು ಮತ್ತು ನೋಟೀಸಿನ ದಿನಾಂಕದಿಂದ ಹದಿನೈದು ದಿನಗಳೊಳಗೆ ಈ ಅದಿನಿಯಮದ ಉಪಬಂಧಗಳ ಪಾಲನೆಗಾಗಿ ಅವಕಾಶವನ್ನು ಒದಗಿಸತಕ್ಕದು. ಕಾರಣ ಕೇಳುವ ನೋಟೀಸಿನ ಅನುಸರಣೆ ಮಾಡಲು ವಿಫಲವಾದಲ್ಲಿ ಮೇಲ್ಕಂಡ ಅಪರಾಧಕ್ಕೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೨೪. ಅಪರಾಧಗಳ ರಾಜಿ ಇತ್ಯರ್ಥ.**– (೧) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ನಂತರ ಮಾಡಿದ ೨೩ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಅಭಿಯೋಜನೆ ಹೂಡುವ ಮೊದಲು ಅಥವಾ ನಂತರವಾಗಲಿ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಿಗಳು ಅಂಥ ಮೊತ್ತಕ್ಕೆ ರಾಜಿ ಇತ್ಯರ್ಥಗೊಳಿಸಬಹುದು.<br>(೨) (೧) ಉಪಪ್ರಕರಣದ ಮೇರೆಗೆ ಅಪರಾಧಿಯ ವಿರುದ್ಧದ ಅಪರಾಧವು ರಾಜಿ ಇತ್ಯರ್ಥಗೊಂಡಲ್ಲಿ ಅಪರಾಧಿಯನ್ನು ಅಭಿಯೋಜನೆಗೆ ಗುರಿಪಡಿಸತಕ್ಕದ್ದಲ್ಲ. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೨೫. ರಾಜ್ಯಮಟ್ಟದ ಸಮಿತಿಯಿಂದ ಮೇಲ್ವಿಚಾರಣೆ.**– (೧) ರಾಜ್ಯಮಟ್ಟದ ಸಮಿತಿಯು ಈ ಅಧಿನಿಯಮದ ಉಪಬಂಧಗಳ ಅನುಷ್ಠಾನದಲ್ಲಿ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು.<br>(೨) ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ಹೊಣೆಗಾರರಾಗಿರುವ ಅಧಿಕಾರಿಗಳ ವಿರುದ್ಧ ಸೂಕ್ತಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರ ಮತ್ತು ಶಿಸ್ತು ಪ್ರಾಧಿಕಾರಕ್ಕೆ ತಿಳಿಸುವುದು ಸದರಿ ಸಮಿತಿಯ ಕರ್ತವ್ಯವಾಗಿರತಕ್ಕದ್ದು.<br>(೩) ರಾಜ್ಯಮಟ್ಟದ ಸಮಿತಿಯ ಶಿಫಾರಸ್ಸಿನ ಮೇಲೆ ನೇಮಕಾತಿ ಪ್ರಾಧಿಕಾರ/ಶಿಸ್ತು ಪ್ರಾಧಿಕಾರವು ವರದಿ ತಲುಪಿದ ದಿನಾಂಕದಿಂದ ಒಂದು ವರ್ಷಕ್ಕೆ ಮೀರದ ಸೂಕ್ತ ಸಮಯದೊಳಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಕಡ್ಡಾಯವಾಗಿರತಕ್ಕದ್ದು.<br>(೪) ರಾಜ್ಯಮಟ್ಟದ ಸಮಿತಿಯು ಅಧಿನಿಯಮದ ಇತರೆ ಉಪಬಂಧಗಳಿಗೆ ಸಂಬಂಧಿಸಿದಂತೆ ಯುಕ್ತ ಕ್ರಮಕೈಗೊಳ್ಳುವುದಕ್ಕಾಗಿ ಸೂಕ್ತ ಪ್ರಾಧಿಕಾರಗಳಿಗೆ ಶಿಫಾರಸ್ಸನ್ನು ಸಹ ಮಾಡಬಹುದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೨೬. ನಿಯಮಗಳ ರಚನಾಧಿಕಾರ.** – (೧) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.<br>(೨) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
| --- | --- |
| ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದು ಮತ್ತು ಸದರಿ ನಿಯಮವನ್ನು ಹಾಗೆ ಮಂಡಿಸಿದ ಅಧಿವೇಶನದ ಅಥವಾ ಆ ಅಧಿವೇಶನದ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು ಮಾಡಕೂಡದೆಂದೂ ಎರಡೂ ಸದನಗಳೂ ನಿರ್ಧರಿಸಿದರೆ, ಆ ನಿಯಮವು ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೨೭. ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು ತನ್ನ ಎಲ್ಲಾ ಅಧಿಕಾರಿಗಳಿಗೆ ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅವಶ್ಯಕವಾಗಬಹುದಾದಂಥ ನಿರ್ದೇಶನಗಳನ್ನು ಅಥವಾ ಸೂಚನೆಗಳನ್ನು ನೀಡಬಹುದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೨೮. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮಗಳ ಅಥವಾ ಮಾಡಿದ ಯಾವುದೇ ಆದೇಶಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆ ಅಥವಾ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವು ಇರತಕ್ಕದ್ದಲ್ಲ. | ೨೮. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–<br><br>ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| ***ಹೊಸ ಸೇರ್ಪಡೆ*** | ***(೨) ಪ್ರಸ್ತುತ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನು ಅಥವಾ ನಿಯಮ, ಈ ಕಾನೂನು ಮತ್ತು ಇದರ ಅಡಿಯಲ್ಲಿ ಹೊರಡಿಸಲಾಗುವ ನಿಯಮಗಳಿಗೆ ವ್ಯತಿರಿಕ್ತವಾದಲ್ಲಿ ಈ ಅಧಿನಿಯಮದ ವಿಧಿಗಳು ಹಾಗೂ ನಿಯಮಗಳನ್ನು ಜಾರಿಗೊಳಿಸತಕ್ಕದ್ದು.*** |

| ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕ | ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚರ್ಚೆಯಾಗಿ ಶಿಫಾರಸ್ಸು ಮಾಡಲಾದ ವಿಧೇಯಕ |
|---|---|
| **೨೯. ತೊಂದರೆಗಳನ್ನು ನಿವಾರಿಸುವ ಅಧಿಕಾರ.**– (೧) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಆ ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು.<br><br>ಪರಂತು, ಈ ಅಧಿನಿಯಮವು ಪ್ರಾರಂಭವದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೨) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೩೦. ತಾತ್ಕಾಲಿಕ ಉಪಬಂಧಗಳು.**– ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ರಾಜ್ಯ ಸರ್ಕಾರವು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಕುರಿತು ಮಾಡಲಾದ ಎಲ್ಲಾ ನಿಯಮಗಳನ್ನು ಹೊರಡಿಸಲಾದ ಎಲ್ಲಾ ಆದೇಶಗಳು, ಅಧಿಸೂಚನೆಗಳು ಸಿಂಧುವಾಗಿರತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದೆ ಅಥವಾ ಹೊರಡಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅವು ಈ ಅಧಿನಿಯಮದ ಅಡಿ ಮಾರ್ಪಡಿಸುವ ಅಥವಾ ಹಿಂಪಡೆಯುವವರೆಗೆ ಮುಂದುವರೆಯತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| **೩೧. ನಿರಸನ ಮತ್ತು ಉಳಿಸುವಿಕೆ.**– (೧) ಕರ್ನಾಟಕ ರಾಜಭಾಷಾ ಅಧಿನಿಯಮ. ೧೯೬೩ (೧೯೬೩ರ ಕರ್ನಾಟಕ ಅಧಿನಿಯಮ ೨೬) ಮತ್ತು ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಅಧಿಕೃತ ಭಾಷೆ) ಅಧಿನಿಯಮ, ೧೯೮೧ (೧೯೮೧ರ ಕರ್ನಾಟಕ ಅಧಿನಿಯಮ ೩೦)ಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| (೨) ಅಂಥ ನಿರಸನ ಏನೇ ಇದ್ದರೂ ಸದರಿ ಅಧಿನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು. | ಯಥವತ್ತಾಗಿ ಉಳಿಸಿಕೊಳ್ಳಲಾಗಿದೆ. |
| * * * | * * * |